# ‘ಕಾಸಿದ್ರೆ ಕೈಲಾಸ’, ಇಲ್ದಿದ್ರೆ..?



ಕೊರೊನಾ ಕರಿನೆರಳು ಸರಿಯುತ್ತಿದ್ದ ಹಾಗೆ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲು ಸಜ್ಜಾಗುತ್ತಿವೆ. ಅವರಲ್ಲಿ ಬಹುತೇಕರು ‘ಹಾಕಿದ ಕಾಸು ವಾಪಸ್ ಬಂದ್ರೆ ಸಾಕು ಗುರೂ’ ಎಂದು ಅಂದುಕೊಳ್ಳುತ್ತಿರುವವರೇ. ಅವರ ಮನಸಲ್ಲಿನ ಕಾಸಿನ ಕುರಿತ ಆತಂಕವನ್ನೇ ಸಿನಿಮಾದ ಶೀರ್ಷಿಕೆಯನ್ನಾಗಿಸಿಕೊಂಡಿದೆ ಇಲ್ಲೊಂದು ಚಿತ್ರತಂಡ. ವೈಭವ್ ಅವರು ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಹೆಸರು, ‘ಕಾಸಿದ್ರೆ ಕೈಲಾಸ’.

ಹಾಗೆಂದು ಇದು ಚಿತ್ರರಂಗದ ಕುರಿತಾದ ಕಥೆಯನ್ನೇನೂ ಒಳಗೊಂಡಿಲ್ಲ. ಬದಲಿಗೆ ಸಮಾಜದಲ್ಲಿ ಯುವಜನತೆ ಡ್ರಗ್ ಮಾಫಿಯಾಗೆ ಒಳಗಾಗುತ್ತಿರುವುದರ ಬಗ್ಗೆ ಮಾತಾಡುವ ಸಿನಿಮಾವಂತೆ. ಮಾದಕದ್ರವ್ಯದ ಜೊತೆಗೆ ಪ್ರೇಮದ ಅಮಲನ್ನೂ ಸೇರಿಸಿ ಕಥೆಯನ್ನು ಹೆಣೆದಿದ್ದಾರಂತೆ ನಿರ್ದೇಶಕ ನಾಗ್ ವೆಂಕಟ್. ಅನಂತಪುರದ ವಾಸಿಕ್ ಅನ್ಸಾದ್ ಈ ಚಿತ್ರಕ್ಕೆ ಹಣ ಹೂಡಿದ್ದಾರೆ.

‘ಕನ್ನಡಕ್ಕಷ್ಟೇ ಅಲ್ಲ, ದಕ್ಷಿಣ ಭಾರತಕ್ಕೇ ಈ ಕಾನ್ಸೆಪ್ಟ್ ಹೊಸದು. ಅದನ್ನು ಅಷ್ಟೇ ಹೊಸದಾಗಿ ನಾವು ಕಟ್ಟಿದ್ದೇವೆ’ ಎಂದ ನಿರ್ದೇಶಕರು ಚಿತ್ರೀಕರಣದಲ್ಲಿ ಉಂಟಾದ ತೊಡಕನ್ನು ನೆನಪಿಸಿಕೊಂಡರು. ಎರಡು ವರ್ಷದ ಹಿಂದೆ ಈ ಚಿತ್ರ ಪ್ರಾರಂಭವಾದ ಕೆಲದಿನಗಳಲ್ಲಿಯೇ ನಾಯಕಿ ಚಿತ್ರದಿಂದ ಹೊರನಡೆದರಂತೆ. ಆಗ ನಿರ್ಮಾಪಕರು ಧೃತಿಗೆಡದೆ ಸುಕನ್ಯಾ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಂಡು ಚಿತ್ರೀಕರಣ ಮುಂದುವರಿಸಲು ಬೆಂಬಲವಾಗಿ ನಿಂತರಂತೆ.

ಸುಕನ್ಯಾ ಅವರಿಗೆ ಇದು ನಾಯಕಿಯಾಗಿ ಮೊದಲ ಸಿನಿಮಾ. ಆಶಿಕ್ ಅರುಣ್ ಸಂಗೀತ, ತ್ಯಾಗರಾಜನ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ■

---

ವ್ಯವಹಾರ ಕುದುರಿಸಿಕೊಂಡ ಚತುರಗುಣವೂ ಈ ಗೆಲುವಿನ ಹಿಂದಿದೆ.

ಈಗ ತಾನೇ ನೆಟ್ಟ ಮೈಲಿಗಲ್ಲನ್ನು ದಾಟುವ ಹುಮ್ಮಸ್ಸಿನಲ್ಲಿ ‘ಕೆಜಿಎಫ್’ ಚಿತ್ರತಂಡವಿದೆ. ಏ. 14ಕ್ಕೆ ಕೆ.ಜಿ.ಎಫ್ ತೆರೆಗೆ ಅಪ್ಪಳಿಸುತ್ತಿದೆ. ಈ ಬಿರುಗಾಳಿ ಹೇಗಿರುತ್ತದೆ ಎಂಬುದರ ಝಲಕ್ ಎಂಬಂತೆ ಬಿಡುಗಡೆಯಾಗಿದ್ದ ‘ತೂಫಾನ್’ ಹಾಡಿಗೆ ಸಿಕ್ಕ ಸ್ಪಂದನವೂ ಜೋರಾಗಿಯೇ ಇದೆ. ಮೊದಲನೇ ಭಾಗದ ಗೆಲುವೇ ಈ ಎರಡನೇ ಭಾಗದ ಬೆನ್ನೆಲುಬೂ ಆಗಿದೆ.

ಹಾಗೆಂದು ಎಲ್ಲವೂ ತೀರ ಸುಲಭವೇನೂ ಇಲ್ಲ. ಯಶ್ ಗಡ್ಡಬಿಟ್ಟುಕೊಂಡು ಬಂದೂಕಿನ ನಳಿಕೆಯ ತುದಿಯ ಬಿಸಿಯಿಂದ ಸಿಗರೇಟು ಹೊತ್ತಿಸಿಕೊಳ್ಳುವುದನ್ನು ತಮಿಳು ಸೂಪರ್ ಸ್ಟಾರ್ ವಿಜಯ್ ನೋಡಿ ಮೀಸೆಯಡಿಯಲ್ಲಿಯೇ ನಗುತ್ತಿದ್ದಾರೆ. ಅವರು ನಾಯಕನಾಗಿ ನಟಿಸಿರುವ ‘ಬೀಸ್ಟ್’ ಒಂದು ದಿನ ಮೊದಲೇ, ಅಂದರೆ ಏ. 13ಕ್ಕೇ ಬಿಡುಗಡೆಯಾಗುತ್ತಿದೆ. ತಮಿಳುನಾಡಿನಲ್ಲಿ ಈಗಾಗಲೇ ಬೀಸ್ಟ್ ಹವಾ ಜೋರಾಗಿಯೇ ಇದೆ. ಈ ಚಿತ್ರ ಐದು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಆ ಐದೂ ಭಾಷೆಗಳ ಅವತರಣಿಕೆಗಳನ್ನೂ ಕರ್ನಾಟಕದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಕರ್ನಾಟಕದಲ್ಲಿ ‘ಬೀಸ್ಟ್’ ವಿತರಣೆಯ ಹಕ್ಕು ಪಡೆದುಕೊಂಡಿರುವ ಧೀರಜ್ ಎಂಟರ್‌ಪ್ರೈಸಸ್ ಹೇಳಿದೆ.

ಅತ್ತ ಹಿಂದಿಯಲ್ಲಿ ಕೆಜಿಎಫ್ ಎದುರಿಗೆ ಅಮೀರ್ ಖಾನ್ ಸಿನಿಮಾ ಬಿಡುಗಡೆಯಾಗಲಿದೆ ಎಂಬ ಸುದ್ದಿ ಹಬ್ಬಿತ್ತು. ಆದರೆ ಈಗ ಅದು ಮುಂದಕ್ಕೆ ಹೋಗಿದೆ. ಹಾಗಾಗಿ ದೊಡ್ಡ ಸಿನಿಮಾವೊಂದರ ಸ್ಪರ್ಧೆ ನಿವಾರಣೆಯಾಗಿದೆ. ಆದರೆ ಅದೇ ದಿನ ಶಾಹೀದ್ ಕಪೂರ್ ಅವರು ನಟಿಸಿರುವ ‘ಜೆರ್ಸಿ’ ಸಿನಿಮಾ ಬಿಡುಗಡೆಯಾಗುತ್ತಿದೆ. ಆದರೆ ಅದು ಕೆಜಿಎಫ್‌ಗೆ ಹೆಚ್ಚಿನ ಸ್ಪರ್ಧೆಯನ್ನೇನೂ ಒಡ್ಡಲಾರದು. ಅಲ್ಲದೆ ಚಿತ್ರದ ಪ್ರಚಾರಕ್ಕಾಗಿಯೂ ತಂಡ ಸಾಕಷ್ಟು ಸಿದ್ಧತೆ ಮಾಡಿಕೊಂಡಿದೆ. ಅದರ ಭಾಗವಾಗಿಯೇ ಇತ್ತೀಚೆಗೆ ಬಾಲಿವುಡ್‌ನ ಖ್ಯಾತ ನಿರ್ದೇಶಕ ಕರಣ್ ಜೋಹರ್, ‘ಕೆಜಿಎಫ್ 2’ ಟ್ರೇಲರ್ ರಿಲೀಸ್ ಮಾಡಿದ್ದಾರೆ. ಚಿತ್ರದ ಪೋಸ್ಟರ್‌ಗಳಿಗೆ ಅಭಿಮಾನಿಗಳಿಂದಲೇ ವಿನ್ಯಾಸಗಳನ್ನು ಆಹ್ವಾನಿಸುವ ಪ್ರಚಾರತಂತ್ರವನ್ನೂ ಹಮ್ಮಿಕೊಳ್ಳಲಾಗಿದೆ.

ಮೊದಲ ಭಾಗದಲ್ಲಿ ದೇಶದಾದ್ಯಂತ ಸಿಕ್ಕಿದ ತಾರಾವರ್ಚಸ್ಸು ಮತ್ತು ಅಭಿಮಾನಿ ಬಳಗದಿಂದ ಹಿಗ್ಗಿರುವ ಯಶ್, ಎರಡನೇ ಭಾಗದಲ್ಲಿ ಅದು ಇಮ್ಮಡಿಯಾಗುವ ವಿಶ್ವಾಸದಲ್ಲಿದ್ದಾರೆ.

ನಿರ್ದೇಶಕ ಪ್ರಶಾಂತ್ ನೀಲ್ ಅವರಂತೂ ಈಗಾಗಲೇ ಪ್ರಭಾಸ್ ಅಭಿನಯದ ‘ಸಲಾರ್’ ಸಿನಿಮಾ ನಿರ್ದೇಶನದಲ್ಲಿ ತೊಡಗಿಕೊಳ್ಳುವುದರ ಮೂಲಕ ದಕ್ಷಿಣ ಭಾರತದ ಮುಖ್ಯ ಮಾಸ್ ನಿರ್ದೇಶಕರ ಸಾಲಿನಲ್ಲಿ ಜಾಗ ಪಡೆದುಕೊಂಡು ಆಗಿದೆ. ಹೊಂಬಾಳೆ ಫಿಲ್ಮ್ಸ್ ಅವರೇ ‘ಸಲಾರ್’ಗೂ ಹಣ ಹೂಡುತ್ತಿದ್ದಾರೆ.

ಆದರೆ ನಾಯಕ ಯಶ್ ಅವರ ಮುಂದಿನ ಹೆಜ್ಜೆ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇಷ್ಟುದೊಡ್ಡ ಯಶಸ್ಸಿನ ನಂತರ ಒಂದು ನಿರ್ವಾತ ಕವಿಯುವ ಅಪಾಯವಂತೂ ಇದ್ದೇ ಇದೆ. ಅದನ್ನು ‘ಬಾಹುಬಲಿ’ ನಂತರದ ಪ್ರಭಾಸ್ ವೃತ್ತಿಬದುಕಿನಲ್ಲಿಯೂ ಕಾಣಬಹುದು. ಆ ನಿರ್ವಾತವನ್ನು ಯಶ್ ಹೇಗೆ ನೀಗಿಸಿಕೊಳ್ಳಲಿದ್ದಾರೆ ಎಂಬ ಕುತೂಹಲವಂತೂ ಎಲ್ಲರಿಗೂ ಇದೆ. ■

